**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301**

**OFFICE OF THE DEPUTY COMMISSIONER, UTTARA KANNADA DISTRICT, KARWAR, -581 301**

ದೂರವಾಣಿ : 08382 226406, 226471 Email: dckarwar@gmail.com

Telephone: 08382 226603 (Fax) Website: http://uttara kannada.nic.in

---

ನಂ:ಕಂಶಾ/ಸಿಬ್ಬಂದಿ(2)/ವಿವ–38/17–18 ದಿನಾಂಕ:08–08–2017

## ಅಧಿಕೃತ ಜ್ಞಾಪನ

***ವಿಷಯ :–*** ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳಿಗೆ ನೇರನೇಮಕಾತಿ ಬಗ್ಗೆ ಪರೀಶೀಲನಾ ಪಟ್ಟಿ ಪ್ರಕಟಿಸುವ ಕುರಿತು.

***ಉಲ್ಲೇಖ:–*** ಈ ಕಾರ್ಯಾಲಯದ ಅಧಿಸೂಚನೆ ಸಮಸಂಖ್ಯೆ ದಿನಾಂಕ:13–07–2017

*******

ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆ ಅಧೀನದಲ್ಲಿ ಬರುವ ಕಚೇರಿಗಳಿಗೆ ಹಾಗೂ ಭೂಮಿ ಕೇಂದ್ರಗಳಲ್ಲಿ ನಾಡಕಚೇರಿಗಳಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗ ಹುದ್ದೆಗಳಿಗೆ ನೇರ ನೇಮಕಾತಿ ಕುರಿತು ಆನ್‌ಲೈನ್ ಮುಖಾಂತರ ಸ್ವೀಕೃತವಾದ ಅರ್ಜಿಗಳನ್ನು ಪರೀಶಿಲಿಸಿ, ಅರ್ಹ ಅಭ್ಯರ್ಥಿಗಳ ನೇಮಕಾತಿ ಕುರಿತು ತಯಾರಿಸಲಾದ ಅರ್ಹ ಅಭ್ಯರ್ಥಿಗಳ ಪಟ್ಟಿ ಮತ್ತು ಪರಿಶೀಲನಾ ಪಟ್ಟಿ (1:5) ಮತ್ತು ತಿರಸ್ಕೃತ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ವೆಬ್ ಸೈಟ್ http://uttarakannada.nic.in ರಲ್ಲಿ ಪ್ರಚುರಪಡಿಸಲಾಗಿದೆ. ಸದ್ರಿ ಪರಿಶೀಲನಾ ಪಟ್ಟಿ (1:5) ಮತ್ತು ತಿರಸ್ಕೃತ ಅಭ್ಯರ್ಥಿಗಳ ಪಟ್ಟಿಗೆ ಆಕ್ಷೇಪಣೆ/ ತಕರಾರುಗಳೇನಾದರೂ ಇದ್ದಲ್ಲಿ ದಾಖಲೆಗಳೊಂದಿಗೆ ಸಲ್ಲಿಸಲು ದಿನಾಂಕ:17–08–2017 ರವರೆಗೆ ಅವಕಾಶ ಕಲ್ಪಿಸಲಾಗಿದೆ. ಅಭ್ಯರ್ಥಿಗಳು ಆಕ್ಷೇಪಣೆ/ತಕರಾರು ಸಲ್ಲಿಸಲು ಕೊನೆಯ ದಿನಾಂಕದ ವರೆಗೆ ಕಾಯದೆ ಮುಂಚಿತವಾಗಿ ಸಲ್ಲಿಸಬಹುದಾಗಿದೆ. ನಂತರದಲ್ಲಿ ಬಂದ ಯಾವುದೇ ಆಕ್ಷೇಪಣೆ/ತಕರಾರು ಪರಿಗಣಿಸಲಾಗುವುದಿಲ್ಲ. ಆಕ್ಷೇಪಣೆ/ತಕರಾರು ಸಲ್ಲಿಸಿದ ಅಭ್ಯರ್ಥಿಯು ತನ್ನ ಪೂರ್ತಿ ವಿಳಾಸ ದೂರವಾಣಿ/ಮೊಬೈಲ್ ಸಂಖ್ಯೆ/ಇ–ಮೇಲ್ ಐಡಿ (ಹೊಂದಿದ್ದಲ್ಲಿ) ವಿವರವನ್ನು ತಪ್ಪದೇ ಸಲ್ಲಿಸಬೇಕು. ಸದ್ರಿ ಪರಿಶೀಲನಾ ಪಟ್ಟಿಯ (1:5) ಅರ್ಹ ಅಭ್ಯರ್ಥಿಗಳು ದಿನಾಂಕ:22–08–2017 ರಂದು ಬೆಳಿಗ್ಗೆ 10.00 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಾರವಾರದಲ್ಲಿ ಖುದ್ದಾಗಿ ಈ ಕೆಳಕಂಡ ಮೂಲ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ತಪ್ಪದೇ ಹಾಜರಿದ್ದು, ತಮ್ಮ ಹಾಜರಾತಿಯನ್ನು ದಾಖಲಿಸಬೇಕು. ದಾಖಲೆ ಪರಿಶೀಲನೆಗೆ **ನಿಗದಿಪಡಿಸಿದ ದಿನಾಂಕದಂದು ಯಾವುದೇ ಕಾರಣಕ್ಕೆ ಅಭ್ಯರ್ಥಿಯು ಗೈರ ಹಾಜರಾದಲ್ಲಿ ನಂತರದಲ್ಲಿ ಅವರ ದಾಖಲೆ ಪರಿಶೀಲನೆಗೆ ಪರಿಗಣಿಸಲಾಗುವುದಿಲ್ಲ.** ಈ ಪರಿಶೀಲನಾ ಪಟ್ಟಿಯಲ್ಲಿ ಕಾಣಿಸಿದ ಅಭ್ಯರ್ಥಿಗಳಿಗೆ ಈ ಕಚೇರಿಯಿಂದ ತಿಳುವಳಿಕೆ ಪತ್ರ ಸ್ವೀಕೃತವಾಗದಿದ್ದರೂ ಸಹ ಈ ಮೇಲಿನ ದಿನಾಂಕದಂದು ಪರಿಶೀಲನೆಗೆ ಹಾಜರಾಗತಕ್ಕದ್ದು. ಪರಿಶೀಲನಾ ಸಮಯದಲ್ಲಿ ಬರುವ ಅಭ್ಯರ್ಥಿಗಳಿಗೆ ಈ ಕಾರ್ಯಾಲಯದಿಂದ ಪ್ರಯಾಣ ಭತ್ಯೆ ಇತ್ಯಾದಿ ನೀಡಲಾಗುವುದಿಲ್ಲ. ಪರಿಶೀಲನಾ ಪಟ್ಟಿಯಲ್ಲಿ

ಕಾಣಿಸಿದ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆ ಬಗ್ಗೆ ಮಾತ್ರ ಸೀಮಿತವಾಗಿದ್ದು, ಅರ್ಹ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿಗೆ ಪರಿಗಣಿಸಲಾಗುವುದು. ಒಂದು ವೇಳೆ ಆಯಾ ವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ನಂತರದ ಅಭ್ಯರ್ಥಿಗಳ ಪರಿಶೀಲನಾ ಪಟ್ಟಿ ಪ್ರಕಟಿಸಲಾಗುವುದು.

**ಪರಿಶೀಲನಾ ಸಮಯದಲ್ಲಿ ಅಭ್ಯರ್ಥಿಗಳು ಹಾಜರಪಡಿಸಬೇಕಾದ ದಾಖಲೆಗಳು ಈ ಕೆಳಗಿನಂತಿವೆ.**

1. ಇತ್ತೀಚಿತಿನ 2 ಪಾಸಪೋರ್ಟ ಅಳತೆಯ ಭಾವಚಿತ್ರಗಳು
2. ದ್ವಿತಿಯ ಪಿ.ಯು.ಸಿ ಮೂಲ ಅಂಕಪಟ್ಟಿ. (ನೇಮಕಾತಿ ಅಧಿಸೂಚನೆಯಲ್ಲಿ ತಿಳಿಸಿರುವಂತೆ)
3. ವಯಸ್ಸಿನ ಬಗ್ಗೆ ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ಜನನ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗಾಗಿ ಹಾಜರಪಡಿಸಬೇಕು.
4. ಜಾತಿಯ ಬಗ್ಗೆ ಮೀಸಲಾತಿ ಬಯಸಿದಲ್ಲಿ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ. ಹಾಜರಪಡಿಸಬೇಕು.
5. ಗ್ರಾಮೀಣ ಮೀಸಲಾತಿ ಹಾಗೂ ಕನ್ನಡ ಮಾಧ್ಯಮ ಮಿಸಲಾತಿ ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರಗಳನ್ನು ಹಾಜರಪಡಿಸಬೇಕು.
6. ಅಂಗವಿಕಲ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿ ಮಂಡಳಿಯಿಂದ ಪಡೆದ ಮೂಲ ಪ್ರಮಾಣ ಪತ್ರ ಹಾಜರಪಡಿಸಬೇಕು.
7. ಮಾಜಿ ಸೈನಿಕರ ಮೀಸಲಾತಿ ಬಯಸಿದಲ್ಲಿ ಅಭ್ಯರ್ಥಿಗಳು ಸೈನಿಕ ಸೇವೆಯಲ್ಲಿ ಬಿಡುಗಡೆಯಾದ/ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರ ಹಾಜರಪಡಿಸಬೇಕು.
8. ಯೋಜನಾ ನಿರಾಶ್ರಿತ ಮೀಸಲಾತಿ ಬಯಸಿದಲ್ಲಿ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ ಹಾಜರಪಡಿಸಬೇಕು.
9. ಸರಕಾರಿ ಸೇವೆಯಲ್ಲಿ ಇರುವವರು (ರಾಜ್ಯ/ಕೇಂದ್ರ) ಸಂಬಂಧಪಟ್ಟ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರವನ್ನು ಹಾಜರಪಡಿಸಬೇಕು.
10. ವಿಧವಾ ಅಭ್ಯರ್ಥಿಯಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ ಹಾಜರಪಡಿಸಬೇಕು.
11. ಜನಗಣತಿ ಕಾರ್ಯದಲ್ಲಿ ಕೆಲಸ ನಿರ್ವಹಿಸಿದ ಅಭ್ಯರ್ಥಿಗಳು ವಯಸ್ಸಿನ ಸಡಲಿಕೆ ಬಯಸಿದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ ಹಾಜರಪಡಿಸಬೇಕು.
12. ಜೀತಮುಕ್ತಿ ಹೊಂದಿದ ಅಭ್ಯರ್ಥಿ ವಯಸ್ಸಿನ ಸಡಲಿಕೆ ಬಯಸಿದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ ಹಾಜಪಡಿಸಬೇಕು.
13. ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸಿದ ಬಗ್ಗೆ acknowdegement ಹಾಗೂ ಹಣ ತುಂಬಿದ ಬಗ್ಗೆ ಬ್ಯಾಂಕ್ / ಆನ್‌ಲೈನ್‌ದಿಂದ ಪಡೆದ ಮೂಲ ಚಲನ ಪ್ರತಿಯನ್ನು ಹಾಜರಪಡಿಸಬೇಕು.

14. ಅಭ್ಯರ್ಥಿಗಳು ಈ ಮೇಲಿನ ಎಲ್ಲ ದಾಖಲೆಗಳನ್ನು ಅಧಿಸೂಚನೆಯ ಕೊನೆಯ ದಿನಾಂಕ: 31-07-2017ರ ಪೂರ್ವದಲ್ಲಿ ಪಡೆದ ಮೂಲ ದಾಖಲೆಗಳನ್ನು ಹಾಗೂ ಅವುಗಳ ಒಂದು ದೃಢೀಕೃತಪ್ರತಿಯನ್ನು ತಪ್ಪದೇ ಹಾಜರುಪಡಿಸಬೇಕು.

ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇರ ನೇಮಕಾತಿ ಪ್ರಾಧಿಕಾರ
ಉತ್ತರ ಕನ್ನಡ ಕಾರವಾರ

ಪ್ರತಿ:

1. ಪ್ರಧಾನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ರವರಿಗೆ ಮಾಹಿತಿಗಾಗಿ ಆದರ ಪೂರ್ವಕ ಸಲ್ಲಿಸಿದೆ.
2. ಪ್ರಧಾನ ಕಾರ್ಯದರ್ಶಿ ಕಂದಾಯ ಇಲಾಖೆ (ಸೇವೆಗಳು) ಬಹುಮಹಡಿ ಕಟ್ಟಡ ಬೆಂಗಳೂರು ರವರಿಗೆ ಮಾಹಿತಿಗಾಗಿ ಆದರ ಪೂರ್ವಕ ಸಲ್ಲಿಸಿದೆ.
3. ಪ್ರಾದೇಶಿಕ ಆಯುಕ್ತರು ಬೆಳಗಾವಿ ರವರಿಗೆ ಮಾಹಿತಿಗಾಗಿ ಆದರ ಪೂರ್ವಕ ಸಲ್ಲಿಸಿದೆ.
4. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಉತ್ತರಕನ್ನಡ ಕಾರವಾರ ರವರಿಗೆ ಸೂಕ್ತಕ್ರಮಕ್ಕಾಗಿ
5. ಈ ಕಾರ್ಯಾಲಯದ ಸೂಚನಾ ಫಲಕಕ್ಕೆ
6. ಹೆಚ್ಚುವರಿ ಪ್ರತಿ ಶಾಖಾ ಕಡತಕ್ಕೆ.